ವಂನಸ್ಸು ಇದ್ದಿದ್ದರೆ ಅದಕ್ಕೆ ಅಡಚಣೆ ಯಾರೂ ಬರುತ್ತಾ ಇರಲಿಲ್ಲ. ಏಕೆ ಈ ರೀತಿ ಮಾಡಲಿಲ್ಲ ಎಂದು ಕೇಳಲಿಕ್ಕೆ ಇಚ್ಛೆಪಡುತ್ತೇನೆ. ಹಿಂದೆ ಆದುದ್ದು ಆಯಿತು, ಮುಂದಾದರೂ ತಕ್ಷಣ ಎಚ್ಚೆತ್ತು ಪ್ರಾಜೆಕ್ಟ್ ಗಳಿಗೆ ಬೇಕಾದಂತಹ ಹಣವನ್ನು ಫಾರೀನ್ ಕಂಟ್ರಿಯಿಂದ ಲೋನ್ ತಂದು ಅಥವಾ ವರ್ಲ್ಡ್ ಬ್ಯಾಂಕ್ ನಿಂದ ಲೋನ್ ತಂದು ಪ್ರಾಜೆಕ್ಟ್ಗಳನ್ನು ಆದಷ್ಟು ಜಾಗ್ರತೆ ಮುಂಗಿಸಿ ರೈತರ ಕಣ್ಣೀರಿನ ಶಾಪ ಏನು ಇದೆ ಅದರಿಂದ ಬಿಡುಗಡೆ ಆಗುವಂತೆ ಮಾಡಬೇಕೆಂದು ಎಂದು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಲಿಫ್ಟ್ ಇರಿಗೇಷನ್ ಮಾಡಿ ತಕ್ಷಣ ನೀರು ಕೊಡಬಹುದು. ಸಾವಿರಾರು ಲಿಫ್ಟ್ ಇರಿಗೇಷನ್ ಮಾಡಿದರೆ ಲಕ್ಷಾಂತರ ಎಕರೆಗೆ ನೀರಾವರಿ ಕೊಡುವುದಕ್ಕೆ ಅವಕಾಶ ಇದೆ. ತಕ್ಷಣ ಸರ್ಕಾರದವರು ಇದಕ್ಕೆ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಲು ಇಚ್ಛೆಪಡುತ್ತೇನೆ. ಕೊನೆಯದಾಗಿ ಟ್ರಿಬ್ಯೂನಲ್ಗೆ ನಾವು ಖಂಡಿತವಾಗಿ ಹೆದರುವ ಅವಶ್ಯಕತೆ ಇಲ್ಲ. ಟ್ರಿಬ್ಯೂನಲ್ಗೆ ಎಷ್ಟು ಸಾಧ್ಯವೋ ಅಷ್ಟು ಎಲ್ಲಾ ರೀತಿಯ ಮಾಹಿತಿಗಳನ್ನು ಕೊಟ್ಟು ಕಠಿಣ ಪದದಲ್ಲಿ ಹೇಳುವುದಾದರೆ ಏನಾದರೂ ಒಂದು ಚೂರು ಅನ್ಯಾಯ ಆದರೆ ಕರ್ನಾಟಕವು ಸಹ ಪಂಜಾಬ್ ಆಗುತ್ತದೆ ಆದಕ್ಕೂ ಕೂಡ ರಾಜ್ಯದ ರೈತರು ತಯಾರು ಇದ್ದಾರೆ ಎನ್ನುವ ಮಾತನ್ನು ತಿಳಿಸಿ ನ್ಯಾಯವಾದ ನೀರಿನ ಹಕ್ಕಿಗೋಸ್ಕರ ಹೋರಾಟ ಮಾಡಬೇಕೆಂದು ಹೇಳುತ್ತೇನೆ. ಇಂತಹ ಒಂದು ಶಕ್ತಿಯನ್ನು ಶ್ರೀಮಾನ್ ವೀರೇಂದ್ರ ಪಾಟೀಲರು ಪ್ರದರ್ಶನ ಮಾಡಿ ಕರ್ನಾಟಕದಲ್ಲಿ ಮುಖ್ಯವಾಗಿ ಕಾವೇರಿ ಬೇಸಿನ್ನ ರೈತರ ಹಕ್ಕಿನ ರಕ್ಷಣೆ ಮಾಡುತ್ತಾರೆ ಎಂದು ಹೇಳುತ್ತೇನೆ. ಹಿಂದೆ ಅವರ ಕಾಲದಲ್ಲಿ ಮೂರು ನಾಲ್ಕು ಡ್ಯಾಮ್ಗಳು ಆಯಿತು. ಕಂಪ್ಲೀಟ್ ಆಗದಿರುವ ಪ್ರಾಜೆಕ್ಟ್ಗಳನ್ನು ಕಂಪ್ಲೀಟ್ ಮಾಡಬೇಕು. ಯಾವ ವಿಧವಾದಂತಹ ದಾಕ್ಷಿಣ್ಯಕ್ಕೂ ಇನ್ನು ಮೇಲಾದರೂ ಬಳಗಾಗಕೂಡದು. ಇನ್ನು ಎರಡು ಮೂರು ತಿಂಗಳು ಕಳೆದರೆ ಬೆಳೆ ಒಣಗಿ ಹೋಗುತ್ತದೆ ನೀರು ಕೊಡಿ ಎಂದು ಆ ಕಡೆಯಿಂದ ಬೇಡಿಕೆ ಬರುತ್ತದೆ. ಈ ಕಡೆಯಿಂದ ಒಂದು ಹನಿ ನೀರನ್ನು ಬಿಟ್ಟು ಕೊಟ್ಟರೂ ಕೂಡ ಕರ್ನಾಟಕದ ರೈತರಿಗೆ ದ್ರೋಹ ಮಾಡಿದ ಹಾಗೆ ಆಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇವರು ಬಿಟ್ಟ ಬಿಟ್ಟ ಹಾಗೆ ಅವರು ಏರಿಯ ಜಾಸ್ತಿ ಮಾಡಿಕೊಳ್ಳುತ್ತಿದ್ದಾರೆ. ರೈಪೇರಿಯನ್ ರೈಟ್ಸ್ ಎಂದೂ ಹೇಳುತ್ತಾರೆ. ರೈಟ್ಸ್ ಅಥವಾ ಪೈಟ್ ಎಂದರೆ ನಾವು ಕೇಳುವುದಿಲ್ಲ. ರೈಟ್ ಇದ್ದರೆ ಅವರ ಮನೆಯ ಹತ್ತಿರ ಇಟ್ಟುಕೊಳ್ಳಲಿ. ಇಲ್ಲಿ ನಮಗೆ ನ್ಯಾಯವಾಗಿ ಬರಬೇಕಾದ್ದನ್ನು ಬಿಟ್ಟು ಉಳಿದುದನ್ನು ಅವರು ಉಪಯೋಗಿಸಿಕೊಳ್ಳಲಿ ಎಂದು ಈ ಸಂದರ್ಭದಲ್ಲಿ ತಿಳಿಸಂತ್ತೇನೆ. ಕರ್ನಾಟಕದ ಜನತೆಗೆ ಅನ್ಯಾಯ ಆಗದ ಹಾಗೆ ಏನೇ ಕಾರ್ಯಕ್ರಮಗಳನ್ನು ತೆಗೆದುಕೊಂಡರೂ ಸಹ ೧೦೦ಕ್ಕೆ ೧೦೦ ಭಾಗ ಈ ಸದನದಲ್ಲಿ ಸರ್ಕಾರದ ಹಿಂದೆ ಇದ್ದೆ ಮುಖ್ಯ ಮಂತ್ರಿಗಳ ಹಿಂದೆ ಇದೆ ಎಂದು ಹೇಳುತ್ತೇನೆ. ಹಾಗೆಯೇ ನಾಲ್ಕು ಕೋಟಿ ಕರ್ನಾಟಕದ ಜನ ಹಿಂದೆ ಇದ್ದಾರೆ. ಒಂದು ದೃಢವಾದ ನಿಲುವನ್ನು ತೆಗೆದುಕೊಂಡು ಕಾವೇರಿ ಬೇಸಿನ್ನಲ್ಲಿನ ರೈತರಿಗೆ ಆಗತಕ್ಕ ಅನ್ಯಾಯವನ್ನು ಹೋಗಲಾಡಿಸಬೇಕೆಂದೂ ಹಾಗೂ ಅವರಿಗೆ ಆಗತಕ್ಕ ಅನುಕೂಲತೆ ಬಗ್ಗೆ ಸರ್ವ ಪ್ರಯತ್ನವನ್ನು ಮಾಡಬೇಕೆಂದು ತಿಳಿಸಿ ನನ್ನ ನಾಲ್ಕು ಮಾತುಗಳನ್ನು ಮುಂಗಿಸುತ್ತೇನೆ.

ಪ್ರಕಟಣೆ ೧

ಉಪಾಧ್ಯಕ್ಷರು.—ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ೯ನೇ ನಿಯಮದ ಮೇರೆಗೆ ಈ ಕೆಳಕಂಡ ಸದಸ್ಯರುಗಳನ್ನು ಪ್ರಸ್ತುತ ಅಧಿವೇಶನದ ಸಮಯದಲ್ಲಿ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಗೈರು ಹಾಜರಿಯಲ್ಲಿ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲು ನಾನು ನಿರ್ದೇಶನ ಮಾಡಿದ್ದೇನೆ.

೧. ಶ್ರೀಮತಿ ರೇಣುಕಾ ರಾಜೇಂದ್ರನ್
೨. ಶ್ರೀ ಜಿ.ಎಸ್. ಆಚಾರ್
೩. ಶ್ರೀ ಬಿ. ಸ್ವಾಮಿ ರಾವ್
೪. ಶ್ರೀ ಬಸವರಾಜ ಪಾಟೀಲ್ ಅಟ್ಟೂರ್
೫. ಶ್ರೀ ಟಿ.ಬಿ. ಜಯಚಂದ್ರ
೬. ಶ್ರೀ ಎಸ್.ಹೆಚ್. ಕೌಜಲಗಿ

ಹಾಗೆಯೇ ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ.

ಕರ್ನಾಟಕ ವಿಧಾನ ಸಭೆಯಿಂದ ವಿಧಾನ ಪರಿಷತ್ತಿನ ಅನುಮೋದನೆಗಾಗಿ ಕಳುಹಿಸಲಾದ ಕೆಳಕಂಡ ವಿಧೇಯಕಗಳಿಗೆ ದಿನಾಂಕ ೪ನೇ ಏಪ್ರಿಲ್ ೧೯೯೦ ರಂದು ವಿಧಾನ ಪರಿಷತ್ತು ಅನುಮೋದನೆ ನೀಡಲಿಲ್ಲ ವೆಂದು ತಿಳಿಸಿರುತ್ತಾರೆ.

೧. ೧೯೯೦ನೇ ಇಸವಿಯ ಕರ್ನಾಟಕ ಮಹಾ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ.

೨. ೧೯೯೦ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತ್, ಮಂಡಲ ಪಂಚಾಯತಿಗಳ ಮತ್ತು ನ್ಯಾಯ ಪಂಚಾಯತಿಗಳ (ತಿದ್ದುಪಡಿ) ವಿಧೇಯಕ.

ಕಾವೇರಿ ಜಲವಿವಾದದ ಬಗ್ಗೆ ಚರ್ಚೆ (ಮು.ವ.)

† ಶ್ರೀ ಕೆ. ಲಕ್ಕಪ್ಪ (ಕಂಡಗಲ್) :—ಮಾನ್ಯ ಅಧ್ಯಕ್ಷರೆ, ಈ ಕಾವೇರಿ ನದಿ ನೀರಿನ ವಿವಾದದ ಬಗ್ಗೆ ಈ ರಾಜ್ಯದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ಅನೇಕ ಚರ್ಚೆಗಳು ನಡೆದಿವೆ. ಈ ರಾಜ್ಯದ ಹಸಿರು ಕ್ರಾಂತಿಗೆ ಅತಿಮುಖ್ಯವಾದಂಥ ನೀರಿನ ಉಪಯೋಗ ಮಾಡತಕ್ಕಂಥ ಬಹಳ ಗಮನಾರ್ಹವಾದಂಥ ವಿಚಾರದ ಬಗ್ಗೆ ಚರ್ಚೆ ನಡೆದಿದೆ. ಈ ರಾಷ್ಟ್ರದಲ್ಲಿರತಕ್ಕಂಥ ನೀರಿನ ವಿಚಾರಗಳು ಅನೇಕ ರಾಜ್ಯಗಳಲ್ಲಿ ಗೊಂದಲವನ್ನುಂಟುಮಾಡಿ ಈ ರಾಷ್ಟ್ರದ ಅನೇಕ ಭಾಗಗಳು ಈ ದಿವಸ ನೀರಾವರಿಯಿಲ್ಲದೆ ಈ ರಾಷ್ಟ್ರದಲ್ಲಿ ಅನೇಕ ರಾಜ್ಯಗಳು ತೊಂದರೆಗೆ ಈಡಾಗಿರತಕ್ಕಂಥ ವಿಚಾರವನ್ನು ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಅದೇರೀತಿಯಾಗಿ ಈ ರಾಜ್ಯದ ಮತ್ತು ನೆರೆ ರಾಜ್ಯಗಳ ನೀರಿನ ಹಂಚಿಕೆ ವಿವಾದ ರಾಷ್ಟ್ರದ ಗಮನವನ್ನು ಸೆಳೆದು ಅನೇಕ ಚರ್ಚೆಗಳು ಸಂಸತ್ತಿನಲ್ಲಿ ಮತ್ತು ರಾಜ್ಯಗಳ ವಿಧಾನಸಭೆಗಳಲ್ಲೂ ಕೂಡ ನಡೆದಿವೆ. ಸುಮಾರು ೧೯೬೨ ರಿಂದ, ೧೯೬೭ ರಿಂದ ಈ ವಿಧಾನ ಸಭೆಯಲ್ಲಿ ಮತ್ತು ಈ ರಾಷ್ಟ್ರದ ಸಂಸತ್ತಿನಲ್ಲಿ ವಿರೋಧಪಕ್ಷದ ಸದಸ್ಯನಾಗಿ ಮತ್ತು ಆಡಳಿತ ಪಕ್ಷದ ಸದಸ್ಯನಾಗಿ ಕೂಡ ನಾನು ಅನೇಕ ಸಾರಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಈಗ ಮುಖ್ಯಮಂತ್ರಿಗಳಾಗಿರತಕ್ಕಂಥ ಮಾನ್ಯ ವೀರೇಂದ್ರ ಪಾಟೀಲರು ಹಿಂದೆ ಮುಖ್ಯ ಮಂತ್ರಿಗಳಾಗಿದ್ದಂಥ ಕಾಲದಲ್ಲಿ ಮತ್ತು ಅದಕ್ಕಿಂತ ಹಿಂದೆ ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಂಥ ಕಾಲದಲ್ಲೂ ಕೂಡ ಈ ಬಗ್ಗೆ ಚರ್ಚೆ ನಡೆದಿದೆ. ೧೯೧೧ ರಲ್ಲೋ ಏನೋ ಈ ಕಾವೇರಿ ನೀರಿನ ವಿವಾದ ಪ್ರಾರಂಭವಾಗಿದ್ದು ಅನೇಕ ಲೇಖನಗಳು ಮತ್ತು ಬರವಣಿಗೆಗಳು ಪ್ರತಿಕೆಗಳ ಮೂಲಕ ಬಂದಿವೆ ಮತ್ತು ಚರ್ಚೆಗಳ ಮೂಲಕ ವಿಚಾರ ಗೊತ್ತಾಗಿದೆ, ೧೯೧೧ ರಲ್ಲಿ ಕೆ ಆರ್. ಎಸ್. ಡ್ಯಾಮನ್ನು ಕಟ್ಟಿದಾಗ ಎಲ್ಲಿ ೮೦ ಅಡಿ ಎತ್ತರ ಕಟ್ಟಬೇಕು ಮತ್ತು ಅಲ್ಲಿರತಕ್ಕಂಥ ೧೧ ಕ್ಯೂಬಿಕ್ ನೀರನ್ನು ಉಪಯೋಗಿಸತಕ್ಕಂಥ ಕಾಲದಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರನ್ನು ಮದ್ರಾಸ್ ಸರ್ಕಾರ ವಿರೋಧಮಾಡಿದೆ. ಆದೇರೀತಿ ಪುನಂ ೧೨೪ ಅಡಿ ಎತ್ತಿಸಿದಂಥ ಕಾಲದಲ್ಲಿ ಅವರು ೪೪ ಟಿಎಂಸಿಎಫ್‌ಟಿ ವಾಟರನ್ನು ಉಪಯೋಗಿಸಬೇಕು ಎಂಬವಿವಾದ ಎದ್ದಾಗಲೂ ಕೂಡ ಎರಡೂ ರಾಜ್ಯಗಳಿಗೂ ಕೂಡ ವ್ಯವಹಾರ ಆಗಿದ್ದುದು ಎಲ್ಲರಿಗೂ ಕೂಡ ಗೊತ್ತಿದೆ. ೧೯೨೪ರಲ್ಲಿ ಅಗ್ರಿಮೆಂಟ್ ಆಗಿ ಆಮೇಲೆ ೧೯೭೪ರಲ್ಲಿ ಆಗಿ, ಹೀಗೆ ಅಗ್ರಿಮೆಂಟ್‌ಗಳ ಬಗ್ಗೆ ಅನೇಕ ರೀತಿಯಲ್ಲಿ ವಿವಾದಗಳು ಎದ್ದು ಯಾವ ರಾಜ್ಯಗಳೂ ಕೂಡ ಸಮರ್ಪಕವಾದಂಥ ಒಂದು ತೀರ್ಮಾನಕ್ಕೆ ಬರದೆ ರಾಷ್ಟ್ರಮಟ್ಟದಲ್ಲಿ ಇದನ್ನು ಗೊಂದಲವಾಗಿ ಮಾಡಿಬಿಟ್ಟರು. ಎಲ್ಲಾ ಗೊಂದಲಮಯವಾಗಿದೆ, ಈ ರಾಜ್ಯದ ನೀರಿನ ವಿವಾದದ ಬಗ್ಗೆ ಅನೇಕ ತಜ್ಞರು ಹೇಳಿದ್ದಾರೆ. ಈ ಒಂದು ನೀರಿನ ವಿವಾದವನ್ನು ನಾವು ತೀರ್ಮಾನ ಮಾಡಿದ್ದರೆ, ರಾಜ್ಯ ಮಟ್ಟದಲ್ಲಿ ತೀರ್ಮಾನ ಮಾಡಿ, ಜಿಲ್ಲಾ ನೀರಿನ ಹಂಚಿಕೆಯನ್ನು ರಾಷ್ಟ್ರೀಕರಣ ಮಾಡಿ, ಈ ರಾಷ್ಟ್ರದ ಸಂಪನ್ಮೂಲವನ್ನು ಎಲ್ಲಾ ರಾಜ್ಯಗಳಿಗೂ, ಯಾವ ರಾಜ್ಯದಲ್ಲಿ ನೀರು ಇದೆ, ಯಾವ ರಾಜ್ಯದಲ್ಲಿ ಅಭಾವ ಇದೆ, ರಾಜ್ಯಗಳ ಬೆಳವಣಿಗೆ ಹಾಗೂ ಬಡತನ ಮತ್ತು ಆರ್ಥಿಕ ಸಾಮಾಜಿಕ ಪರಿಸ್ಥಿತಿಯನ್ನು ನೋಡಿಕೊಂಡು, ಸಮಾನತೆಯ ದೃಷ್ಟಿಯಿಂದ ನೀರನ್ನು ಹಂಚಿಕೆ ಮಾಡಿದರೆ, ರಾಷ್ಟ್ರ ಸಮೃದ್ಧವಾಗಿ ಆಗುತ್ತದೆ. ಎಲ್ಲಾ ಕಡೆಯಲ್ಲಿಯೂ ಏಕರೀತಿಯಿಂದ ರಾಜ್ಯದ ಅಭಿವೃದ್ಧಿಗೆ ಕಾರಣವಾಗುತ್ತದೆ. ಈ ದೃಷ್ಟಿಯಿಂದ ನದಿ ನೀರನ್ನು ರಾಷ್ಟ್ರೀಕರಣ ಮಾಡಬೇಕೆನ್ನುವ ಮಾತನ್ನು ರಾಷ್ಟ್ರಮಟ್ಟದಲ್ಲಿ ಸಂಸತ್ತಿನಲ್ಲಿ ಈ ವಿಚಾರ ಬಂದಾಗ ಅನೇಕ ಸದಸ್ಯರುಗಳು ಹೇಳಿದ್ದಾರೆ. ಕೊನೆಗೆ ಏನಾಯಿತೆಂದರೆ, ಈ ವಿವಾದವನ್ನು ರಾಜ್ಯಮಟ್ಟಕ್ಕೆ ತಂದರು. ರಾಜ್ಯಗಳ ತೀರ್ಮಾನಕ್ಕೆ ಬಿಡದೇ ಇರುವುದಕ್ಕೆ ಕೇಂದ್ರ ಸರ್ಕಾರದ ಒಂದು ನೀತಿ ಕಾರಣವಾಗಿದೆ. ಈ ಒಂದು ನದಿ ನೀರಿನ ವಿವಾದದಲ್ಲಿ ಮದ್ರಾಸ್, ಕೇರಳ ಪಾಂಡಿಚೇರಿ ಹಾಗೂ ಕರ್ನಾಟಕ ರಾಜ್ಯಗಳು ಸಿಕ್ಕಿವೆ. ಮದ್ರಾಸ್ ರಾಜ್ಯದವರು ಬಹುಮಟ್ಟಿಗೆ ನಮಗೆ ಸೇರಿಬೇಕಾದ ಹೆಚ್ಚಿನ ಭಾಗದ ನೀರನ್ನು ಉಪಯೋಗಿಸಿದರೂ. ಕರ್ನಾಟಕದಲ್ಲಿ ಬಂದಂಥ ಇಂದಿನ ಸರ್ಕಾರ ಇರಬಹುದು, ಹಿಂದಿನ ಸರ್ಕಾರಗಳಿರಬಹುದು, ಅದಕ್ಕೂ ಹಿಂದೆ ಇದ್ದಂಥ ಸರ್ಕಾರಗಳು ಇರಬಹುದು ತಮ್ಮ ಪ್ರಭಾವಿತ ಮೂಲಕ ಈ ಸಭೆಯ ಹಾಗೂ ಸಂವಿಧಾನ ಒಂದು ಆಶ್ರಯದಲ್ಲಿ ಸಹನೆ ಸಹಕಾರದ ಮೂಲಕ ಇತ್ಯರ್ಥ ಮಾಡತಕ್ಕ ಮಾತುಗಳನ್ನು ಆಡಲಾಯಿತೇ